ಗಡಿಯಲ್ಲಿ ಚೀನಾ– ಭಾರತ ಸೈನಿಕರ ಘರ್ಷಣೆ ನಡೆಯುತ್ತಿದ್ದಂತೆಯೇ ಭಾರತದಾದ್ಯಂತ ಚೀನಾ ವಿರೋಧಿ ಪ್ರತಿಭಟನೆಗಳು ನಡೆಯುತ್ತಿವೆ. 'ಕೋವಿಡ್ 19' ಆತಂಕದ ನಡುವೆಯೂ ದೆಹಲಿಯಲ್ಲಿನ ಇಂಡಿಯಾ ಗೇಟ್ ಬಳಿ ಮೇಣದಬತ್ತಿ ಹಚ್ಚಿ, ಫಲಕಗಳನ್ನು ಹಿಡಿದು ಪ್ರತಿಭಟನೆ ವ್ಯಕ್ತಪಡಿಸಿದರು.








ಐತಿಹಾಸಿಕ ಗೊಂದಲಗಳನ್ನೇ ಆಧಾರಗಳನ್ನಾಗಿ ಮುಂದಿಡುತ್ತಾ ಚೀನಾ ಸುತ್ತಮುತ್ತಲ ದೇಶಗಳ ಗಡಿ ಉಲ್ಲಂಘಿಸಲು ತನಗಿರುವ ಹಕ್ಕು ಮಂಡಿಸುತ್ತದೆ. ಚೀನಾದ ಅಧಿಕಾರ ಕೇಂದ್ರಕ್ಕೆ ದೇಶದಲ್ಲಿ ಪ್ರಶ್ನಾತೀತ ನಾಯಕತ್ವ ಸಿಕ್ಕಿದ್ದು ಮತ್ತು ಅದರ ಮಿಲಿಟರಿ ಬಲ ಅಗಾಧ ಪ್ರಮಾಣದಲ್ಲಿ ಹೆಚ್ಚಾಗಿದ್ದು ಈ ದುಸ್ಸಾಹಸಗಳಿಗೆ ಇನ್ನಷ್ಟು ಕುಮ್ಮಕ್ಕು ನೀಡಿದಂತಾಯಿತು.

ಭಾರತದ ವಿಚಾರದಲ್ಲಿ ಚೀನಾ 'ಸಲಾಮಿ ಸ್ಲೈಸ್' (ಇಷ್ಟಿಷ್ಟೇ ಕತ್ತರಿಸು) ಎನ್ನುವ ಮತ್ತೊಂದು ತಂತ್ರವನ್ನು ಪ್ರಯೋಗಿಸುತ್ತಿದೆ. ಎದುರಾಳಿ ದೇಶಕ್ಕೆ ಸೂಚನೆಯೇ ಕೊಡದಂತೆ, ಹೆಜ್ಜೆಹೆಜ್ಜೆಯಾಗಿ ಮುಂದೊತ್ತಿ ಬರುವುದು. ಎಚ್ಚೆತ್ತುಕೊಂಡವರು ಪ್ರತಿರೋಧ ತೋರಿದಾಗ ಸಂಧಾನದ ನೆಪದಲ್ಲಿ ಚೌಕಾಸಿಗೆ ಇಳಿದು ಒಂದು ಹೆಜ್ಜೆ ಹಿಂದೆ ಸರಿದು, ಇನ್ನೊಂದು ಹೆಜ್ಜೆಯನ್ನು ತನ್ನ ದೇಶದ ಭಾಗವಾಗಿಸಿಕೊಳ್ಳುವುದು ಚೀನಾದ ವೈಖರಿ.

ಇದೀಗ ಲಡಾಖ್‌ನ ಗಲ್ವಾನ್ ನದಿ ಕಣಿವೆ, ಪಾಂಗಾಂಗ್ ತ್ಸೊ ಮತ್ತು ಸಿಕ್ಕಿಂನ ನಕು ಲಾ ಪ್ರದೇಶಗಳಲ್ಲಿ ಚೀನಾ ವರ್ತನೆಯ ಹಿಂದಿರುವ ತಂತ್ರ ಇದೇ ಆಗಿದೆ. ಭಾರತದ ನೆಲಕ್ಕೆ ನುಗ್ಗಿ, ಸೇನಾ ಶಿಬಿರಗಳನ್ನು ಸ್ಥಾಪಿಸಿ, ಅದನ್ನು ತೆರವುಗೊಳಿಸಿ ಎಂದವರನ್ನೇ ಕೊಂದು, 'ಭಾರತೀಯ ಸೈನಿಕರು ಗಡಿ ಉಲ್ಲಂಘಿಸಿದರು. ಹೀಗಾಗಿ ಪ್ರತಿಕ್ರಿಯಿಸಬೇಕಾಯಿತು' ಎಂದು ಹೇಳಿಕೆ ಹೊರಡಿಸುತ್ತದೆ.

ಇದನ್ನು ಅರ್ಥ ಮಾಡಿಕೊಂಡಿರುವ ಭಾರತ ಲಡಾಖ್‌ನ ಸೇನಾ ನೆಲೆಗೆ ಟ್ಯಾಂಕ್ ಸಹಿತ ಯುದ್ಧೋಪಕರಣಗಳನ್ನು ರವಾನಿಸಿ ಸಾಕಷ್ಟು ಸಿದ್ಧತೆಯೊಂದಿಗೆ ಎದೆಸೆಟೆಸಿ ನಿಂತಿದೆ. ಹೀಗಾಗಿಯೇ ಈ ಬಾರಿಯ ಉದ್ವಿಗ್ನತೆ ಸದ್ಯಕ್ಕೆ ಶಮನವಾಗದು.

## ಏಕೆ ಈಗ?

ಟಿಬೆಟ್ ವಿಚಾರದಲ್ಲಿ ಭಾರತ ತಳೆದ ನಿಲುವು ಮತ್ತು ದಲೈಲಾಮಾ ಅವರಿಗೆ ಆಶ್ರಯ ನೀಡಿದ್ದು 1962ರ ಭಾರತ–ಚೀನಾ ಯುದ್ಧಕ್ಕೆ ಮುಖ್ಯ ಕಾರಣ ಎನ್ನಲಾಗುತ್ತದೆ. ಚೀನಾವನ್ನು, ಅದರ ಅತ್ಯುನ್ನತ ನಾಯಕ ಮಾವೊ ಝೆಡಾಂಗ್ ಅವರನ್ನು ನೆಹರು ಅತಿಯಾಗಿ ನಂಬಿದ್ದರು. ಆದರೆ ಚೀನಾ ನಾಯಕರು ಮಾತ್ರ ಲಾಗಾಯ್ತಿಯಿಂದ ಚಾಲ್ತಿಯಲ್ಲಿದ್ದ ವಿಸ್ತರಣೆಯ ಮಹತ್ವಾಕಾಂಕ್ಷೆಯನ್ನು ಕೈಬಿಟ್ಟಿರಲಿಲ್ಲ. ಟಿಬೆಟ್ ವಿವಾದವನ್ನು ನೆಪವಾಗಿಸಿಕೊಂಡ ಚೀನಾ ಆಕ್ರಮಣ ನಡೆಸಿತು. ಮುಂದೇನಾಯಿತು ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ.

ಈಗ ಗಲ್ವಾನ್ ಕಣಿವೆ ಸಂಘರ್ಷದತ್ತ ಗಮನ ಹರಿಸೋಣ. ಅಂದಿನಂತೆ ಇಂದೂ ಸಹ ಉನ್ನತ ನಾಯಕರಲ್ಲಿ ಸ್ನೇಹ–ವಿಶ್ವಾಸಗಳಿವೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಈವರೆಗೆ 18 ಬಾರಿ ಪರಿಸ್ಪರ ಕೈಕುಲುಕಿದ್ದಾರೆ. ಆದರೆ ಕೆಳಹಂತದಲ್ಲಿ ಅದರಲ್ಲಿಯೂ ಗಡಿಯಲ್ಲಿ ಉದ್ವಿಗ್ನತೆ ಶಮನವಾಗುತ್ತಲೇ ಇಲ್ಲ. ಈ ಬಾರಿ ಗಲ್ವಾನ್‌ನಲ್ಲಿ ಚೀನಾ ಮುಂದೊತ್ತಿ ಬಂದು ಭಾರತವನ್ನು ಕೆಣಕಲು ಇರುವ ಕಾರಣಗಳನ್ನು ವಿಶ್ಲೇಷಿಸಿದಾಗ ಅಕ್ಷಾಯ್ ಚಿನ್ ವಿಚಾರ ಮುನ್ನೆಲೆಗೆ ಬರುತ್ತದೆ.

ಜಮ್ಮು ಮತ್ತು ಕಾಶ್ಮೀರಕ್ಕಿದ್ದ ವಿಶೇಷ ಅಧಿಕಾರ ಹಿಂಪಡೆದ ಸಂದರ್ಭದಲ್ಲಿ 'ಪಾಕ್ ಆಕ್ರಮಿತ ಕಾಶ್ಮೀರ ಮತ್ತು ಅಕ್ಷಾಯ್ ಚಿನ್ ಪ್ರದೇಶ ಸೇರಿದಂತೆ ಸಮಗ್ರ ಭಾರತವನ್ನು ಮತ್ತೆ ರೂಪಿಸುತ್ತೇವೆ. ಅದಕ್ಕಾಗಿ ರಕ್ತ ಹರಿಸಲೂ ಸಿದ್ಧ' ಎಂಬರ್ಥದಲ್ಲಿ ಗೃಹ ಸಚಿವ ಅಮಿತ್ ಶಾ ಹೇಳಿಕೆ ನೀಡಿದ್ದರು. ಇನ್ನೊಂದೆಡೆ ಲಡಾಖ್ ವಲಯದಲ್ಲಿ ಸೇನಾ ನಿಯೋಜನೆಯನ್ನು ಕ್ರಮವಾಗಿ ಹೆಚ್ಚಿಸಿದ್ದ ಭಾರತ, ಪೂರ್ಣ ಪ್ರಮಾಣದ ಟ್ಯಾಂಕ್ ತುಕಡಿ ನಿಯೋಜಿಸುವಲ್ಲಿ ಯಶಸ್ವಿಯಾಗಿತ್ತು. 2008ರ ನಂತರ ಆರಂಭವಾಗಿದ್ದ ಗಡಿಯಲ್ಲಿ ರಸ್ತೆ ನಿರ್ಮಾಣ ಕಾಮಗಾರಿಗೆ ಹೊಸ ವೇಗ ನೀಡಿ